ತೂಗಿತೂಗಿ ಕೊಡುವನು. ಕಮಲಾಪುರದ ಕೆರೆಯ ಮೀನಿನ ರುಚಿ ಜಗತ್ತಿನಲ್ಲಿ ಎಲ್ಲೂ ಇಲ್ಲ.

**6**

ಹಂಪಿರೋಡಿನ ಈ ನೋಟ, ಗಂಧ, ರುಚಿ, ಶಬ್ದ, ಸ್ಪರ್ಶಗಳಿಗೆ ಇಂದ್ರಿಯಗಳನ್ನು ಇಪ್ಪತ್ತೈದು ವರ್ಷ ಒತ್ತೆಯಿಟ್ಟು ತಣಿಸಿದ ನಾನು, ಈಗ ಹೊಸಹಾದಿ ಹಿಡಿದು ಕುರುಡಾಗಿ ಕಿವುಡಾಗಿ ಮೂಗನಾಗಿ ಹೋದೆ. ಹೊಸ ಹಾದಿಯ ಪಯಣದಲ್ಲಿ ಸ್ವಾರ್ಥವಿದೆ, ಅರ್ಥವಿಲ್ಲ. ಪಯಣಿಸುವ ವಾಹನ, ಹಿಡಿಯುವ ಹಾದಿ ನಮ್ಮ ಅನುಭವಗಳನ್ನು ನಿರ್ಧರಿಸುತ್ತದೆಯೇ? ನಮ್ಮ ಅನುಭವಗಳು, ನಮ್ಮ ನೋಟಕ್ರಮ ಮತ್ತು ವಿಚಾರಕ್ರಮಗಳನ್ನು ಬದಲಿಸುತ್ತವೆಯೇ? ಇದು ಹೌದಾದರೆ, ಹಂಪಿರೋಡಲ್ಲಿ ನಡಿಗೆ, ಸೈಕಲ್ಲು, ಸ್ಕೂಟರು, ಬಸ್ಸು ಕಾರು ಹಿಡಿದು ಪಯಣಿಸಿದವರಿಗೆ ದಕ್ಕಿರುವ ಅನುಭವಗಳಲ್ಲಿ ಎಷ್ಟೆಲ್ಲ ವೈವಿಧ್ಯ ಇದ್ದೀತು? ನಾನು ಕಾರನ್ನೇರಿ ಈ ಅನುಭವ ಲೋಕದಿಂದ ದೂರನಾದೆನೇನೊ? ಈ ತನಕ ವಿಶ್ವವಿದ್ಯಾಲಯಕ್ಕೆ ಕಲಿಸಲು ಹೋಗುತ್ತಿದ್ದೇನೆ ಎಂದು ಭಾವಿಸಿದ್ದೆ. ಆದರೆ ಹಂಪಿರೋಡಿನ ಜನ–ದನ, ದೃಶ್ಯ–ವಾಸನೆ ಎಲ್ಲವೂ ಕಲಿಸುತ್ತಿದ್ದವು ಎಂದು ಈಗ ಮನವರಿಕೆ ಆಗುತ್ತಿದೆ. ರಸ್ತೆಯ ಮೇಲಿನ ಮಂದಿಯನ್ನು ಹುಟ್ಟಾ ಹಗೆಗಳಂತೆ ಕಾಣುವ ವಾಹನಿಗರು, ರೋಡಿರುವುದು ತಮಗಾಗಿ ಮಾತ್ರ ಎಂದು ತಿಳಿದಿರುತ್ತಾರೆ. ರೋಡಮೇಲಣ ಹಕ್ಕು ಮನುಷ್ಯರಿಗೆ ಅಥವಾ ವಾಹನಗಳಿಗೆ ಮಾತ್ರವಲ್ಲ, ನಾಯಿ ದನ ಹಾವು ಕೋಳಿ ಇರುವೆ ಗೊದ್ದಗಳಿಗೂ ಇದೆ. ಈ ಸರಳ ಸತ್ಯವನ್ನು ಮನಗಾಣಿಸಲೆಂದೇ ಹಂಪಿರೋಡು ರೂಪುಗೊಂಡಂತಿದೆ. ಒಮ್ಮೆ ರೈಲ್ವೇ ಕ್ರಾಸಿಂಗಿನಲ್ಲಿ ಗೇಟು ತೆರೆದೊಡನೆ ಸ್ಕೂಟರ್ ನುಗ್ಗಿಸಲು ಯತ್ನಿಸಿದೆ. ಬಹಳ ಹೊತ್ತಿನಿಂದ ಬುಸುಗರೆಯುತ್ತಿದ್ದ ಎತ್ತುಗಳು ಕಬ್ಬಿನಬಂಡಿ ಹೊತ್ತು ನಿಂತಿದ್ದನ್ನು ಗಮನಿಸಲಿಲ್ಲ. ಮೂಕಿಯ ಮೇಲಿದ್ದ ರೈತ 'ಏ ಸ್ಕೂಟರಾ, ಬಂಡಿ ನಿಂತಿರದು ತಿಳಿಯಂಗಿಲ್ಲೇನು? ಸ್ಕೂಟರಿಗೆ ಬ್ರೇಕೈತಿ. ಈ ಬಂಡಿಗೈತಾ? ಮೂಗಜಲ್ಮ ಕಾಣಂಗಿಲ್ಲ?' ಎಂದು ಗದರಿಸಿದ. ಹೌದಲ್ಲ, ಆದ್ಯತೆ ಸಿಗಬೇಕಾದ್ದು ಸೀಟಿನ ಮೇಲೆ ಕುಳಿತ ವಾಹನದವರಿಗೊ ನೊಗಹೊತ್ತು ನಿಂತ ಎತ್ತುಗಳಿಗೊ? ಹಾಗಾದರೆ, ವೇಗದ ವಾಹನಗಳಿಗಾಗಿ ಎತ್ತಿನಬಂಡಿ, ಸೈಕಲ್ಲು, ತಳ್ಳುಗಾಡಿ ನಿಷೇಧಿಸುವ ಹೈವೇಗಳು ಜೀವವಿರೋಧಿಗಳೇ?

ಹಂಪಿರೋಡಿನ ರೈತಾಪಿ ಊರುಗಳು ಹೊಸಪೇಟೆ ಪಟ್ಟಣಕ್ಕೆ ಸಮೀಪವರ್ತಿ ಆಗಿರುವುದರಿಂದಲೊ ಏನೊ, ನಿಧಾನವಾಗಿ ಬದಲಾಗುತ್ತಿವೆ. ತಿಪ್ಪೆಜಾಗದಲ್ಲಿ ಟ್ರಾಕ್ಟರು–ಫರ್ಟಿಲೈಜರಿನ ಅಂಗಡಿ ಇಳಿದಿವೆ. ಊರಮಗ್ಗಲಿನ ಹೊಲ, ತೋಟಗಳಲ್ಲಿ ರೆಸಾರ್ಟು ಮೇಲೆದ್ದಿವೆ. ಅದರ ಒಳಹೊರಗೆ ದೇಶ ವಿದೇಶದ ಪ್ರವಾಸಿಗರು. ಆದರೂ ಈ ಊರುಗಳಲ್ಲಿ ಈ ಸೀಮೆಯ ಯಾವುದೊ ಜೀವದ್ರವ್ಯ ಒಣಗದೆ ಉಳಿದುಕೊಂಡಿದೆ. ಹಂಪಿರೋಡು ತನ್ನದೇನನ್ನೊ ಬಿಟ್ಟುಕೊಡುತ್ತ, ಮತ್ತೇನನ್ನೊ ಪಡೆದುಕೊಳ್ಳುತ್ತ ಬದಲಾಗುತ್ತಿರುವ ಭಾರತದ ಪ್ರತೀಕವೇ? ಬೃಹತ್ ಕಾರ್ಖಾನೆಗಳೂ ಅವಕ್ಕೆ ಮೈನನ್ನು ಸಾಗಿಸುವ ಟಿಪ್ಪರುಗಳೂ ವಾಹನ ಕಂಪೆನಿಗಳ ಶೋರೂಮುಗಳೂ ಕಬ್ಬಿಣದ ಸುರುಳಿಗಳನ್ನು ಯಾವುದೊ ಬಂದರಿಗೆ ಸಾಗಿಸುವ ಅಷ್ಟಾದಶ ಚಕ್ರದ ಲಾರಿಗಳೂ ಇರುವ ಬಳ್ಳಾರಿ ಹೈವೇ ಜನವಿಹೀನ ಅಭಿವೃದ್ಧಿಯ ಸಂಕೇತವೇ? ಪ್ರಶ್ನೆಗಳು ಸರಳವಾಗಿವೆ. ಜವಾಬು ಇಷ್ಟು ಸರಳವಾಗಿಲ್ಲ.

ಹಂಪಿರೋಡಿನಲ್ಲಿ ಹತ್ತುವರ್ಷದ ಹಿಂದೆ ಕಾಣಸಿಗುತ್ತಿದ್ದ ಒಬ್ಬ ಅಜ್ಜನ ನೆನಪಾಗುತ್ತಿದೆ. ಆತ ಬೆಳಿಗ್ಗೆ ಕಮಲಾಪುರದಿಂದ ಹೊರಟು ಹೊಸಪೇಟೆಯವರೆಗೆ, ಉದ್ದ ಹಿಡಿಕೆಯುಳ್ಳ ಹಡಗಲಿ ಹಿಡಿದುಕೊಂಡು, ಹಾದಿಯಲ್ಲಿ ಸಿಗುವ ಎಲ್ಲ ಗುಡಿ, ದರ್ಗಾಗಳಿಗೆ ಮುಷ್ಟಿ ಹೂ ಅರ್ಪಿಸುತ್ತ